ಬರಿನ ನೈರುತ್ಯ ಮೂಲೆಯ ವರಿವಿಗೂ ಹೋಗುತ್ತದೆ. ಅಲ್ಲಿಂದ ಮುಂದಕ್ಕೆ ಈಶಾನ್ಯಮುಖವಾಗಿ ಸರ್ವೆ 390ನೆ ನಂಬರಿನ ಆಗ್ನೇಯ ಸರಹದ್ದಿನ ಮೂಲೆಯ ವರಿವಿಗೂ ಕಲ್ಲಹಳ್ಳಿಯ ಕೆರೆಯ ಧಡವನ್ನು ವಳಗೊಂಡು ವಾಯವ್ಯಕ್ಕೆ ತಿರಿಗಿ ಕಲ್ಲಹಳ್ಳಿ ಕೆರೆಯ ಏರಿಯನ್ನು ಅನುಸರಿಸುತ್ತದೆ. ತರುವಾಯ ಸರ್ವೆ 327ನೆ ನಂಬರಿನ ಬಳಿಯಲ್ಲಿ ಕಲ್ಲಹಳ್ಳಿ ಕೆರೆಯ ಎಡಭಾಗದ ಕೋಡಿಯನ್ನು ದಾಟಿ ಸರ್ವೆ 330—333—335ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಪಣಕನಹಳ್ಳಿ ಗ್ರಾಮದ ಎಲ್ಲೆಯನ್ನು ಸರ್ವೆ 336ನೆ ನಂಬರಿನ ಮಧ್ಯಭಾಗದಲ್ಲಿ ಪಣಕನಹಳ್ಳಿಗೆ ಹೋಗತಕ್ಕ ಭಂಡೀದಾರಿಯ ಬಳಿ ಸೇರುತ್ತದೆ. ನಂತರ ಸರ್ವೆ 336ನೆ ನಂಬರಿನ ಈಶಾನ್ಯ ಎಲ್ಲೆಯನ್ನು ಅನುಸರಿಸಿ ಸರ್ವೆ 455ನೆ ನಂಬರಿನ ವಾಯವ್ಯ ಮೂಲೆಯ ವರಿವಿಗೂ ಹೋಗಿ ಶಿವಹಳ್ಳಿ ರಸ್ತೆಯ ವರಿವಿಗೂ ನೆಟ್ಟಗೆ ಹೋಗಿ ಸದರಿ ರಸ್ತೆಯನ್ನು ದಾಟಿ ಸರ್ವೆ 456ನೆ ನಂಬರಿನ ಉತ್ತರ ಎಲ್ಲೆಯನ್ನು ಅನುಸರಿಸಿ ಸದರೀ ನಂಬರಿನ ಆಗ್ನೇಯ ಮೂಲೆಯ ವರಿವಿಗೂ ಹೋಗುತ್ತದೆ. ತರುವಾಯ ಉತ್ತರಕ್ಕೆ ಹೊರಟು ಸರ್ವೆ 877—458—471—475—875—476—481ನೆ ನಂಬರುಗಳ ಪಶ್ಚಿಮ ಎಲ್ಲೆಯಾಗಿ ಸರ್ವೆ 482ನೆ ನಂಬರಿನ ವಾಯವ್ಯ ಮೂಲೆಯ ವರಿವಿಗೂ ಹೋಗಿ ಫನಹ ಪಶ್ಚಿಮಕ್ಕೆ ತಿರಿಗಿ ಸರ್ವೆ 484 ಮತ್ತು 872ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ನಂತರ ಉತ್ತರಾಭಿಮುಖವಾಗಿ ಹೊರಟು ಸರ್ವೆ 525ನೆ ನಂಬರಿನ ಉತ್ತರ ಮೂಲೆಯ ವರಿವಿಗೂ ಸರ್ವೆ 486—495—520—523—524 ಮತ್ತು 525ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಅಲ್ಲಿ ಬನರಾಳು ರಸ್ತೆಯನ್ನು ದಾಟಿಕೊಂಡು ಪೂರ್ವಾಭಿಮುಖವಾಗಿಯೇ ಸರ್ವೆ 528, 529, 530, 531, 532, 533, 534, 537, 538, 546 ಮತ್ತು 548ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ತರುವಾಯ ದಕ್ಷಿಣಕ್ಕೆ ತಿರಿಗಿ ಸರ್ವೆ 561ನೆ ನಂಬರಿನ ಉತ್ತರ ಮತ್ತು ಪೂರ್ವದ ಸರಹದ್ದನ್ನು ಅನುಸರಿಸಿ ಪೂರ್ವಕ್ಕೆ ತಿರಿಗಿಕೊಂಡು ಸರ್ವೆ 563 ಮತ್ತು 573ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ಅಲ್ಲಿಂದ ಮಂಡ್ಯ ಮತ್ತು ಗೋಪಾಲಪುರದ ಕೆರೆಗಳ ಕೋಡಿ ಹಳ್ಳಗಳ ಧಡಗಳನ್ನು ಅನುಸರಿಸಿ ಸರ್ವೆ 598ನೆ ನಂಬರಿನ ಈಶಾನ್ಯ ಮೂಲೆಯ ವರಿವಿಗೂ ಹೋಗುತ್ತದೆ. ಇಲ್ಲಿ ದಕ್ಷಿಣಾಭಿಮುಖವಾಗಿ ಸರ್ವೆ 56ನೆ ನಂಬರಿನೆಲ್ಲಿ ಗುತ್ತ ಲಗ್ಗಾವುದ ಎಲ್ಲೆ ಬಳಿ ಆಗ್ನೇಯ ಮೂಲೆಯ ವರಿವಿಗೂ ಮಂಜ್ಯದ ಗ್ರಾಮದ ಸರಹದ್ದನ್ನು ಅನುಸರಿಸಿ ಪಶ್ಚಿಮಕ್ಕೆ ತಿರುಗಿ ಸರ್ವೆ 56, 57, 58, 59, 60, 118 ಮತ್ತು 119ನೆ ನಂಬರುಗಳ ದಕ್ಷಿಣ ಸರಹದ್ದಿನ ಎಲ್ಲೆಯನ್ನನುಸರಿಸಿ ಒನ್ನೂರು ರಸ್ತೆಯನ್ನು ದಾಟಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

ಜೆ. ಬಿ. ಹೆಬ್ಲಿಕಾರ್,
ಫಾರ್ ಡೆಪ್ಯುಟಿ ಕಮಿಷನರ್.

---

## ಪ್ರಕಟನೆ.

ತಾರೀಖು 5ನೆ ಮಾರ್ಚಿ 1909.

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟ್ ಹೈಪ್ಯರಾಜಪೇಟೆ ತಾಲ್ಲೂಕು ರೆಕಾರ್ಡಿನಲ್ಲಿ ತಹಲ್ ವರಿವಿಗೂ ಭದ್ರಪಡಿಸಿಟ್ಟಿದ್ದ 1813 ಲಾಗಾಯಿತು 1833ನೆ ಸಾಲ್ ವರಿವಿಗಿನ ಕುಳವಾರ್ ಚಿಟ್ಟಗಳನ್ನು ಈ ಲಾಗಾಯಿತು ಮೂರು ತಿಂಗಳು ಕಳೆದನಂತರ ರೂಲ್ಸು ಪ್ರಕಾರ ನಾಶಪಡಿಸಲ್ಪಡುತ್ತೆಯಾದ್ದರಿಂದ ಇವುಗಳ ಕಾಪಿಯನ್ನು ಅಪೇಕ್ಷಿಸುವವರು ವಾಯಿದೆ ಅಂದರ್ ಅರ್ಜಿಕೊಟ್ಟ ಕಾಪಿ ಪಡಿಯಬಹುದಾಗಿರುತ್ತೆ.

ಎಂ. ಕಾಂತರಾಜೇ ಅರಸ್,
ಡೆಪ್ಯುಟಿ ಕಮಿಷನರ್.

---

## ಶಿವಮೊಗ್ಗ ಡಿವೀಜ್ಞ್ ಸೆಂಟ್ರಲ್ ರಿಕಾರ್ಡ್ ಆಫೀಸ್.

### ರಿಕಾರ್ಡುಗಳನ್ನು ನಾಶಪಡಿಸುವಿಕೆ.

ಶಿವಮೊಗ್ಗ, ತಾರೀಖು 19ನೆ ಫೆಬ್ರುವರಿ 1909.

ಮೈಸೂರು ಚೀಫ್ ಕೋರ್ಟ್ 1905ನೆ ಇಸವಿ ಸೆಪ್ಟಂಬರು 26ನೆ ಮಾರ್ಕ್ಯಂ 122ನೆ ನಂಬರಿ ರೂಲ್ಸು ಆಫ್ ಪ್ರಾಕ್ಟೀಸ್ ಅನುಸರಿಸಿ ಇದರಿಂದ ಸಮಸ್ತರಿಗು ತಿಳಿಯಪಡಿಸುವದೇನಂದರೆ—

ಈ ಡಿವೀಜನ್ನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1905ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1906ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ ದಾಖಲಾದ ಈ ಕೆಳಗೆ ವಿವರಿಸಿ ಇರುವ ಮೊಕದ್ದಮೆಗಳ ವ್ಯಕ್ತಿ ಫೈಸಲಾದವುಗಳಲ್ಲಿ ಕಕ್ಷಿಗಾರರಿಂದ ಲೂ ವತ್ತು ಸಾಕ್ಷಿಗಳಿಂದಲೂ ಸಹಾ ಹಾಜರ್ಮಾಡಲ್ಪಟ್ಟ ವಿಸಿಪ್ಪ ದಸ್ತಾವೇಜುಗಳು ಮೊದಲಿ ವಾಪಸು ತೆಗದುಕೊಳ್ಳಲ್ಪಡದೆ ಇದ್ದ

ಸಕ್ಷದಲ್ಲಿ ಮೇಲ್ಕಂಡ ರೂಲ್ಸ ಆಫ್ ಪ್ರಾಕ್ಟಿಸ್‌ನಲ್ಲಿ ಉದಹರಿಸಿರುವ ಪಾಯಿದೆ ನಂತರ ನಾಶಪಡಿಸಲ್ಪಡುತ್ತವೆ ತಿಳಿಯುವದು ಅಂದರೆ ಫೈಸಲಾದ ಮೂರು ವರುಷದ ವಳಗ.

| ಕೋರ್ಟುಗಳ ಹೆಸರು. | ತಾರೀಖು ಸಲ್ಲಿ. | ಮೊಕದ್ದಮೆಗಳ ಸ್ವಭಾವ. | | | |
|---|---|---|---|---|---|
| | | ಸಿವಿಲ್ ಸೂಟುಗಳು. | ಅಮಲ್ಜಾರಿ. | ಮಿಸಲೇನಿಯಸ್. | ಅಪೀಲು. |
| ಶಿವಮೊಗ್ಗ ಡಿಸ್ಟ್ರಿಕ್ಟ್ ಕೋರ್ಟು. | 1905—1906 | 1ರ ಲಾ॥ 3ರ ವರಿಗೆ | 1ರ ಲಾ॥ 28ರ ವರಿಗೆ | 1ರಲಾ॥226ರ ವರಿಗೆ | 1ರಲಾ॥215ರ ವರಿಗೆ |
| ಶಿವಮೊಗ್ಗ ಸಬ್ ಜಡ್ಜಿ ಕೋರ್ಟು. | | 1ರಿಂದ 154 | 1ರಿಂದ 124 | 1ರಿಂದ 100 | 1ರಿಂದ 212 |
| ಶಿವಮೊಗ್ಗ ಮುನ್ಸೀಫ್ ಕೋರ್ಟು. | | 1ರಿಂದ 920 | 1ರಿಂದ 1620 | 1ರಿಂದ 1062 | ಡಿಟೋ |
| ಚಿತ್ರದುರ್ಗ ಮುನ್ಸೀಫ್ ಕೋರ್ಟು. | | 1ರಿಂದ 1430 | 1ರಿಂದ 1696 | 1ರಿಂದ 1061 | ಡಿಟೋ |
| ಸಾಗರ ಮುನ್ಸೀಫ್ ಕೋರ್ಟು. | | 1ರಿಂದ 540 | 1ರಿಂದ 910 | 1ರಿಂದ 660 | ಡಿಟೋ |
| ಚಿಕ್ಕಮಗಳೂರು ಮುನ್ಸೀಫ್ ಕೋರ್ಟು. | | 1ರಿಂದ 705 | 1ರಿಂದ 993 | 1ರಿಂದ 662 | ಡಿಟೋ |
| ಲೇಟ ಎಡೆಹಳ್ಳಿ ಮುನ್ಸೀಫ್ ಕೋರ್ಟು. | | 1ರಿಂದ 427 | 1ರಿಂದ 620 | 1ರಿಂದ 425 | ಡಿಟೋ |

ಆರ್. ಬಿ. ಫ್ಲವ್ಮರ್, ಆಫೀಸರ್ ಇನ್ ಛಾರ್ಜ್ ಸೆಂಟ್ರಲ್ ರಿಕಾರ್ಡ್, ಶಿವಮೊಗ್ಗ ಡಿವಿಜ್.

## ಬೆಂಗಳೂರು ಸಬ್ ಜಡ್ಜ್‌ರವರ ಕ್ವೋರ್ಟ್‌ನಲ್ಲಿ.

ಸ್ ೧೯೦೮—೦೯ನೆ ಇಸವಿ ಮಿ॥ ಅರ್ಜೀ ನಂಬರು 649.

ಮೈಸೂರು ಗವರ್ನಮೆಂಟಿನಲ್ಲಿ ಅಸ್ಸಿಟಲ್ ಅಸಿಸ್ಟೆಂಟರಾಗಿ ಗುಬ್ಬಿಲಿದ್ದು ಬೆಂಗಳೂರಲ್ಲಿ 29—10—08ರಲ್ಲಿ ಫವತಿಪಟ್ಟ ಡಿ. ಬಿ. ಲಕ್ಷ್ಮಣ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಕುಪ್ಪುಸಾಮಿ ಮೊದಲಿಯಾರ್ರು, 2ನೆ ಜಗನ್ನಾಥ ಮೊದಲಿಯಾರ್ರು ಮೈನರ್, ಗಾರ್ಡಿಯರ್ ಡಿ. ಬಿ. ರಾಮಚಂದ್ರ ಮೊದಲಿಯಾರ್ರು, ಮೃತಪಟ್ಟ ಸದರೀ ಲಕ್ಷ್ಮಣ ಮೊದಲಿಯಾರ್ರಿಗೆ ಮುಖ್ಯ ಬಾಧ್ಯರಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಣ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 2,395—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಸ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಚಂದ್ರ ಮೊದಲಿಯಾರ್ರ ಅರ್ಜಿಯನ್ನು ಸ್ ೧೯೦೯ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಣ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ 2ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೮—೦೯ನೆ ಇಸವಿ ಮಿ॥ ಅರ್ಜೀ ನಂಬರು 742.

ಬೆಂಗಳೂರು ತಾಲ್ಲೂಕು ಹೊರವಾವು ಅಗರದಲ್ಲಿದ್ದು ಫವತಿಪಟ್ಟ ಸುಂಕಾರಡ್ಡಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಮುನಿಯಪ್ಪನ ಮಗ ಸಂಜೀವರಡ್ಡಿ, ಮೃತಪಟ್ಟ ಸದರೀ ಸುಂಕಾರಡ್ಡಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊರವಾವು ಅಗರದ ಸ್ಥಳದಲ್ಲಿ ಮೃತಪಟ್ಟ ಸುಂಕಾರಡ್ಡಿ ಜಿಂದಗಿ ಬಗ್ಯಾಗಿ ಬರತಕ್ಕ 338-0-0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಸ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಜೀವರಡ್ಡಿ ಅರ್ಜಿಯನ್ನು ಸ್ ೧೯೦೯ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಂಕಾರಡ್ಡಿ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.